ಉತ್ತರ ಪತ್ರಿಕೆಗಳನ್ನು ಕಳಂಹಿಸಂವುದಕ್ಕಾಗಿ ಕಬ್ಬಿಣದ ಪೆಟ್ಟಿಗೆಗಳನ್ನು ಟೆಂಡರ್ ಕರೆಯದೇ ಖರೀದಿಸಿರುವುದು.

೨೭೬. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ವಂಂಖ್ಯಿವಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಲೋಕ ಸೇವಾ ಆಯೋಗವು ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಿಸಲು ಅವುಗಳನ್ನು ಕಬ್ಬಿಣದ ಪೆಟ್ಟಿಗೆಗಳಲ್ಲಿ ತುಂಬಿ ಕಳುಹಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿವೆಯೇ ;

ಆ) ಅಂಥ ಪೆಟ್ಟಿಗೆಗಳನ್ನು ಖರೀದಿಸಲು ಕೆ.ಪಿ.ಎಸ್.ಸಿ.ಯವರು ಸರಕಾರದ ಪರವಾನಿಗೆ ಪಡೆದಿದ್ದಾರೆಯೇ ಹಾಗಿದ್ದಲ್ಲಿ ಎಂದು ಪಡೆದಿದ್ದಾರೆ ;

ಇ) ಯಾವ ಯಾವ ದಾಸ್ತಾನುಗಾರರಿಂದ ಖರೀದಿಸಲಾಯಿತು ಹಾಗೂ ಎಷ್ಟು ಹಣವನ್ನು ಪಾವತಿ ಮಾಡಲಾಗಿದೆ.

ಈ) ಪೆಟ್ಟಿಗೆಗಳನ್ನು ಬಹಿರಂಗ ಖರೀದಿ ತರುವುದಕ್ಕೆ ಮುಂಚೆಯೆ ಹಣ ಪಾವತಿ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿವೆಯೆ ;

ಉ) ದರಪಟ್ಟಿ ಕರೆಯಬೇಕೆಂಬ ನಿಯಮವು ಜಾರಿಯಲ್ಲಿ ಇದೆಯೇ ; ಇಲ್ಲವಾದಲ್ಲಿ ಇಂಥ ಕಾನೂನು ಬಾಹಿರ ಕೆಲಸ ಮಾಡಿದ ಅಧಿಕಾರಿಗೆ ಯಾವ ವಿಧವಾದ ಶಿಕ್ಷೆಯನ್ನು ಕೊಡಲಾಗುವುದು ;

ಊ) ದರಪಟ್ಟಿ ಕರೆದಿದ್ದರೆ, ಅವುಗಳ ವಿವರಗಳನ್ನೊದಗಿಸುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ನೀಡಲಾದ ಸಾದಿಲ್ವಾರು ಅನುದಾನದಲ್ಲಿ ಖರೀದಿಸಿರುವುದರಿಂದ ಸರ್ಕಾರದ ಅನುಮತಿ ಪಡೆದಿರುವುದಿಲ್ಲ.

ಇ) ಬೆನಕ ಇಂಜಿನಿಯರಿಂಗ್ ವರ್ಕ್ಸ್, ರಾಜಾಜಿನಗರ, ಬೆಂಗಳೂರು ಇವರಿಂದ ಖರೀದಿಸಲಾಗಿದ್ದು ಅವರಿಗೆ ಒಟ್ಟು ರೂ. ೬೨,೪೫೭-೫೦ಗಳನ್ನು ಪಾವತಿ ಮಾಡಲಾಗಿದೆ.

ಈ) ಇಲ್ಲ.

ಉ) ದರಪಟ್ಟಿ ಕರೆಯಬೇಕೆಂಬ ನಿಯಮವು ಜಾರಿಯಲ್ಲಿದೆ. ಆದರೆ ಸರ್ಕಾರದಿಂದ ಅಂಗೀಕೃತವಾದ ರೇಟ್-ಕಾಂಟ್ರಾಕ್ಟ್ ಸಂಸ್ಥೆಗಳಿಂದ ಖರೀದಿಸಿರುವುದರಿಂದ ಮತ್ತು ಅವುಗಳನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಧೃಢೀಕರಿಸಿರುವುದರಿಂದ ದರಪಟ್ಟಿ ಕರೆಯಲಾಗಿರುವುದಿಲ್ಲ ಆದುದರಿಂದ ಯಾವುದೇ ಅಧಿಕಾರಿಗೆ ಕಾನೂನು ಬಾಹಿರ ಕೃಮಕ್ಕಾಗಿ ಶಿಕ್ಷೆ ವಿಧಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) 'ಉ' ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಐ. ಎ. ಎಸ್. ಅಧಿಕಾರಿಯ ಮೇಲೆ ಕೊಟ್ಟಿಂಥ ದೂರುಗಳು ವಿಲೇವಾರಿಯಲ್ಲಿ ಮಂದಗತಿ

೨೭೭. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಲೋಕಾಯುಕ್ತದಲ್ಲಿ ಐ.ಎ.ಎಸ್. ಅಧಿಕಾರಿಗಳ ಮೇಲೆ ಕೊಟ್ಟ ದೂರಿನ ವಿಚಾರಣಾ ಕ್ರಮವು ಮಂದಗತಿಯಲ್ಲಿ ಸಾಗುತ್ತಿದ್ದು ಅಧಿಕಾರಿಗೆ ರಕ್ಷಣೆ ಒದಗಿಸುತ್ತಿರುವ ವಿಷಯವು ಸರಕಾರದವರ ಗಮನಕ್ಕೆ ಬಂದಿವೆಯೇ ;